ನಗರ ಯೋಜನಾ ಪ್ರಾಧಿಕಾರ ಕಛೇರಿ
ಎಸ್.ಜೆ.ಆರ್.ವೈ ಮೊದಲನೇ ಮಹಡಿ
ಪುರಸಭಾ ಆವರಣ, ಹುಣಸೂರು-571105

# ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು


ಮೊದಲನೇ ಮಹಡಿ, ಎಸ್.ಜೆ.ಆರ್.ವೈ ಕಟ್ಟಡ, ನಗರ ಸಭೆ ಆವರಣ, ಹುಣಸೂರು–571105

Gmail.hunsurplanning@gmail.com

ದೂರವಾಣಿ:08222–295122


ಸಂ:ಹು.ಯೋಪ್ರಾ/ವಾ.ವ/ 124 /2023–24

ದಿನಾಂಕ: 30/06/23

ರವರಿಗೆ,

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ, ಬೆಂಗಳೂರು–01

ಮಾನ್ಯರೇ,

ವಿಷಯ: ಹುಣಸೂರು ಯೋಜನಾ ಪ್ರಾಧಿಕಾರದ 2022–23ನೇ ಸಾಲಿನ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ.

ಉಲ್ಲೇಖ: ದಿನಾಂಕ:28.06.2023ರಂದು ದೂರವಾಣಿ ಮೂಲಕ ಸೂಚಿಸಿದಂತೆ.

*****

ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:28.06.2023ರಂದು ದೂರವಾಣಿ ಮೂಲಕ ಸೂಚಿಸಿರುವಂತೆ, ಹುಣಸೂರು ಯೋಜನಾ ಪ್ರಾಧಿಕಾರದ 2022–23ನೇ ಸಾಲಿನ (ದಿನಾಂಕ:01.04.2022 ರಿಂದ 31.01.2023ರವರೆಗೆ) ವಾರ್ಷಿಕ ವರದಿಯ ಸಂಕ್ಷಿಪ್ತ ಮಾಹಿತಿಯನ್ನು ಕನ್ನಡ (Nudi-01) ಮತ್ತು ಅಂಗ್ಲ (English) ಭಾಷೆಗಳಲ್ಲಿ ತಯಾರಿಸಿ 30 ಸಂಖ್ಯೆಯ bookletಗಳನ್ನು ಹಾಗೂ Scan copyಯ 250 CD ಗಳನ್ನು ಈ ಪತ್ರದೊಂದಿಗೆ ಅಡಕಗೊಳಿಸಿ ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ.

30/06/2023

ಸದಸ್ಯ ಕಾರ್ಯದರ್ಶಿಗಳು
ಹಾಗೂ ಸಹಾಯಕ ನಿರ್ದೇಶಕರು
ಹುಣಸೂರು ಯೋಜನಾ ಪ್ರಾಧಿಕಾರ,
ಹುಣಸೂರು

# ಹುಣಸೂರು ಯೋಜನಾ ಪ್ರಾಧಿಕಾರ

ಹುಣಸೂರು – 571105

2022–23 ನೇ ಸಾಲಿನ

# ವಾರ್ಷಿಕ ವರದಿ

30/06/2023

ಸದಸ್ಯ ಕಾರ್ಯದರ್ಶಿಗಳು
ಹಾಗೂ ಸಹಾಯಕ ನಿರ್ದೇಶಕರು.
ಹುಣಸೂರು ಯೋಜನಾ ಪ್ರಾಧಿಕಾರ.
ಹುಣಸೂರು

## 1. ಪೀಠಿಕೆ :-

ಹುಣಸೂರು ಪಟ್ಟಣವು ಮೈಸೂರು ಜಿಲ್ಲಾ ಕೇಂದ್ರದಿಂದ 45 ಕಿ.ಮೀ. ಅಂತರದಲ್ಲಿದ್ದು, ಪೂರ್ವಕ್ಕೆ ಮೈಸೂರು ತಾಲ್ಲೂಕು, ಪಶ್ಚಿಮಕ್ಕೆ 23 ಕಿ.ಮೀ. ಅಂತರದಲ್ಲಿ ಪಿರಿಯಾಪಟ್ಟಣ ತಾಲ್ಲೂಕು ದಕ್ಷಿಣಕ್ಕೆ 28 ಕಿ.ಮೀ. ಅಂತರದಲ್ಲಿ ಹೆಚ್.ಡಿ.ಕೋಟೆ ತಾಲ್ಲೂಕು ಮತ್ತು ಉತ್ತರಕ್ಕೆ 21 ಕಿ.ಮೀ. ಅಂತರದಲ್ಲಿ ಕೆ.ಆರ್.ನಗರ ತಾಲ್ಲೂಕುಗಳನ್ನು ಗಡಿಯನ್ನಾಗಿ ಹೊಂದಿದೆ. ಹುಣಸೂರು ಪಟ್ಟಣವು ಮಲೆನಾಡಿನ ಸೆರಗಿನಲ್ಲಿರುವ ಬಯಲು ಸೀಮೆಯ ಅರೆಮಲೆನಾಡು ಪ್ರದೇಶವಾಗಿದೆ. ಲಕ್ಷ್ಮಣತೀರ್ಥ ನದಿಯು ದಕ್ಷಿಣ ಕೊಡಗಿನಲ್ಲಿ ಹುಟ್ಟಿ, ಈ ತಾಲ್ಲೂಕಿನಲ್ಲಿ ಹರಿದು ಕಾವೇರಿ ನದಿಯನ್ನು ಸೇರುತ್ತದೆ. ಈ ನದಿಯು ಹುಣಸೂರು ಪಟ್ಟಣದ ಜೀವನದಿಯಾಗಿದೆ. ಈ ಪಟ್ಟಣದಲ್ಲಿ ಒಂದು ರಾಷ್ಟ್ರೀಯ ಹೆದ್ದಾರಿ ಎರಡು ರಾಜ್ಯ ಹೆದ್ದಾರಿ ಮತ್ತು ಒಂದು ಜಿಲ್ಲಾ ಮುಖ್ಯ ರಸ್ತೆ ಹಾದುಹೋಗಿರುತ್ತದೆ ಹಾಗೂ ಕೊಡಗು ಜಿಲ್ಲೆಯ ಪ್ರವಾಸಿ ತಾಣಗಳಿಗೆ ಈ ಪಟ್ಟಣದ ಮೂಲಕ ಹಾದು ಹೋಗಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪಟ್ಟಣವನ್ನು ಯೋಜನಾ ಬದ್ದವಾಗಿ ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಹುಣಸೂರು ಪಟ್ಟಣವು ಸೇರಿದಂತೆ ಸುತ್ತಮುತ್ತಲ ಒಟ್ಟು 12 ಗ್ರಾಮಗಳನ್ನು ಒಳಗೊಂಡಂತೆ ಸರ್ಕಾರವು ಒಟ್ಟು 4809.08 ಹೆಕ್ಟೇರ್ ವಿಸ್ತೀರ್ಣಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಸಿ)ರನ್ವಯ ಸ್ಥಳೀಯ ಯೋಜನಾ ಪ್ರದೇಶವೆಂದು ಸರ್ಕಾರದ ಆದೇಶ ಸಂಖ್ಯೆ: ನಅಇ/184/ಮೈಅಪ್ರಾ/2016 ದಿನಾಂಕ: 04/03/2017 ರನ್ವಯ ರಚನೆಯಾಗಿದ್ದು, ದಿನಾಂಕ: 14/04/2017 ರ ಪ್ರಕಾರ ಹುಣಸೂರು ಯೋಜನಾ ಪ್ರಾಧಿಕಾರವನ್ನು ಸ್ವತಂತ್ರವಾಗಿ ರಚಿಸಿ ಘೋಸಿಸಿರುತ್ತದೆ. ಸದರಿ ಸರ್ಕಾರದ ಆದೇಶದಂತೆ ದಿನಾಂಕ:14.04.2017ರಂದು ಯೋಜನಾ ಪ್ರಾಧಿಕಾರದ ಕೆಲಸವನ್ನು ಪ್ರಾರಂಭಿಸಲಾಗಿದೆ.

### ಅ) ಪ್ರಾಧಿಕಾರದ ಉದ್ದೇಶಗಳು:-

ಹುಣಸೂರು ಯೋಜನಾ ಪ್ರಾಧಿಕಾರವು ಸರ್ಕಾರದ ಆದೇಶ ಸಂಖ್ಯೆ: ನಅಇ/184/ಮೈಅಪ್ರಾ/ 2016 ದಿನಾಂಕ: 04/03/2017 ರನ್ವಯ ರಚನೆಯಾಗಿದ್ದು, ದಿನಾಂಕ:14/04/2017 ರಿಂದ ಕಾರ್ಯಾರಂಭ ಮಾಡಿರುತ್ತದೆ. ಪ್ರಾಧಿಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ-1961ರ ಕಲಂ 4(ಸಿ) ರನ್ವಯ ಕಾರ್ಯ ನಿರ್ವಹಿಸಬೇಕಾಗಿದ್ದು, ಸ್ಥಳೀಯ ಯೋಜನಾ ಪ್ರದೇಶದ/ ಪ್ರಾಧಿಕಾರದ ವ್ಯಾಪ್ತಿಗೆ

ಮಹಾಯೋಜನೆ ಸಿದ್ಧಪಡಿಸುವುದು, ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಸಂಸ್ಥೆ (ಹುಣಸೂರು ನಗರಸಭೆ ಮತ್ತು ಗ್ರಾಮ ಪಂಚಾಯಿತಿ) ಗಳಿಗೆ ತಾಂತ್ರಿಕ ವಿಷಯಗಳಲ್ಲಿ ನೆರವು ನೀಡುವುದು ಹಾಗೂ ಖಾಸಗಿ ಬಡಾವಣೆಗಳಿಗೆ ಅನುಮೋದನೆ ನೀಡುವುದು, ವಿನ್ಯಾಸ ನಕ್ಷೆ ಬಿಡುಗಡೆ, ಕಟ್ಟಡ ಪರವಾನಿಗೆ ಮತ್ತು ಯೋಜನಾಬದ್ಧವಾಗಿ ಅಭಿವೃದ್ಧಿಗಳನ್ನು ನಿಯಂತ್ರಿಸುವುದು ಪ್ರಾಧಿಕಾರದ ಮುಖ್ಯಧ್ಯೇಯವಾಗಿದೆ. ಈ ವ್ಯಾಪ್ತಿಯಲ್ಲಿ ನೀಡಲಾಗುವ ಅನುಮತಿಗಳಿಗೆ ಪ್ರಾಧಿಕಾರವು ಪರಿಶೀಲನಾ ಶುಲ್ಕ ಕೆ.ಟಿ.ಸಿ.ಪಿ ಕಾಯ್ದೆಯನ್ವಯ ಮತ್ತು ಇತರೆ ಶಾಸನಬದ್ಧ ಶುಲ್ಕಗಳನ್ನು ಭರಿಸಿಕೊಳ್ಳಲಾಗುತ್ತಿದೆ.

ಆ) **ಕಾರ್ಯಚಟುವಟಿಕೆಗಳು:-**

ಪ್ರಾಧಿಕಾರವು ತನ್ನ ವ್ಯಾಪ್ತಿಗೆ ಮಹಾಯೋಜನೆಯನ್ನು ತಯಾರಿಸಿ ಸರ್ಕಾರದ ಅನುಮೋದನೆ ಪಡೆಯುವ, ಕಾಯ್ದೆಯನ್ವಯ ಮಹಾಯೋಜನೆಯನ್ನು ಪರಿಷ್ಕರಿಸುವ, ಮಹಾಯೋಜನೆ ರೀತ್ಯಾ ಅಭಿವೃದ್ಧಿಗಳನ್ನು ನಿಯಂತ್ರಿಸುವ ಮತ್ತು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಖಾಸಗಿ ಬಡಾವಣೆಗಳಿಗೆ ಅನುಮೋದನೆ ನೀಡುವ ಹಾಗೂ ಕಾರ್ಯಗತಗೊಳಿಸುವ ಮತ್ತು ಮಹಾಯೋಜನೆಯಂತೆ ವಿವಿಧ ಭೂ ಉಪಯೋಗಗಳನ್ನು ನಿಯಂತ್ರಿಸುವ ಮುಖ್ಯ ಕಾರ್ಯ ಚಟುವಟಿಕಗಳನ್ನು ಹೊಂದಿರುತ್ತದೆ.

2). **ಆಡಳಿತಾತ್ಮಕ ರಚನೆ:-**

**ಅ) ಹುಣಸೂರು ಯೋಜನಾ ಪ್ರಾಧಿಕಾರವು 2022-23ನೇ ಸಾಲಿನಲ್ಲಿ ಕೆಳಕಂಡಂತೆ ಆಡಳಿತ ವ್ಯವಸ್ಥೆ ಹೊಂದಿರುತ್ತದೆ.**

| ಕ್ರ ಸಂ | ಹೆಸರು ಮತ್ತು ಪದನಾಮ | ಅವಧಿ |
|---|---|---|
| 01 | ಶ್ರೀ.ಹೆಚ್.ಕೆ.ಗಣೇಶ್<br>**ಅಧ್ಯಕ್ಷರು** | ದಿನಾಂಕ:31.03.2021 ರಿಂದ ಇಲ್ಲಿಯವರೆಗೆ |
| 02 | 1) ಶ್ರೀ ಸಿ.ಎಸುಮನಾಯ್ಕ.ಸಿ ಸದಸ್ಯ ಕಾರ್ಯದರ್ಶಿ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು/ಸದಸ್ಯ ಕಾರ್ಯದರ್ಶಿಗಳು, | ದಿನಾಂಕ:31.03.2021 ರಿಂದ 06.07.2022 |

| | | |
|---|---|---|
| | ಯೋಜನಾ ಪ್ರಾಧಿಕಾರ, ಹುಣಸೂರು<br>2) ಶ್ರೀ.ಹೆಚ್.ವಿ.ಶ್ರೀಧರ್, ಸಹಾಯಕ ನಿರ್ದೇಶಕರು/**ಸದಸ್ಯ ಕಾರ್ಯದರ್ಶಿಗಳು,**<br>ಯೋಜನಾ ಪ್ರಾಧಿಕಾರ, ಹುಣಸೂರು | ದಿನಾಂಕ:07.07.2023 ರಿಂದ |
| 03 | ಪೌರಾಯುಕ್ತರು, ನಗರಸಭೆ, ಹುಣಸೂರು<br>**ಸದಸ್ಯರು** | ದಿನಾಂಕ01.04.2021ರಿಂದ |
| 04 | ಸರ್ಕಾರದಿಂದ 3 ಜನ ಅಧಿಕಾರೇತರ ಸದಸ್ಯರುಗಳನ್ನು ಮಾಡಲಾಗಿದೆ.<br>1. ಶ್ರೀ.ಗೋವಿಂದನಾಯ್ಕ–ಸದಸ್ಯರು<br>2. ಶ್ರೀ.ಟಿ.ಡಿ.ನಾರಾಯಣ–ಸದಸ್ಯರು<br>3. ಶ್ರೀ.ಹೆಚ್.ಸಿ.ರವಿ–ಸದಸ್ಯರು<br>ಹುಣಸೂರು ನಗರಸಭೆಯಿಂದ ನಾಮ ನಿರ್ದೇಶಿತ ಸದಸ್ಯರು<br>1.ಶ್ರೀ.ಹೆಚ್.ಪಿ.ಸತೀಶ್ ಕುಮಾರ್<br>2. ಶ್ರೀ.ಸ್ವಾಮಿಗೌಡ | ಸದಸ್ಯರು<br><br>ದಿನಾಂಕ:31.03.2021 ರಿಂದ<br>ದಿನಾಂಕ:31.03.2021 ರಿಂದ<br>ದಿನಾಂಕ:31.03.2021 ರಿಂದ<br>ದಿನಾಂಕ:31.03.2021 ರಿಂದ<br>27.10.2022ರವರೆಗೆ<br>ದಿನಂಕ:27.10.2022 ರಿಂದ |

**ಆ) ಆಡಳಿತಾತ್ಮಕ ವೆಚ್ಚದ ವಿವರ :–**

- ಅಧ್ಯಕ್ಷರ ಮಾಸಿಕ ಗೌರವ ಧನ
- ಸದಸ್ಯ ಕಾರ್ಯದರ್ಶಿಯವರ ವೇತನ ಮತ್ತು ಭತ್ಯೆಗಳು
- ಸರ್ಕಾರದಿಂದ ನೇಮಕವಾದ ಸದಸ್ಯರ ಮಾಸಿಕ ಗೌರವ ಧನ
- ಹೊರಗುತ್ತಿಗೆ ನೌಕರರ ವೇತನ
- ಸಾದಿಲ್ವಾರು ವೆಚ್ಚಗಳು, ದೂರವಾಣಿ, ಪೀಠೋಪಕರಣ, ಮುದ್ರಣ, ರೇಖಿನಾ/ಲೇಖಿನಾ ಸಾಮಗ್ರಿ ಹಾಗೂ ಇನ್ನಿತರ ವೆಚ್ಚಗಳು)

**3.ಈವರೆಗಿನ ಪ್ರಗತಿ :–**

**ಈವರೆಗೆ ಸಾಧಿಸಿದ ಒಟ್ಟಾರೆ ಪ್ರಗತಿಯ ಹೆಗ್ಗುರುತುಗಳ ಸಂಕ್ಷಿಪ್ತ ಮಾಹಿತಿ:**

- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 10(1)ರಡಿಯಲ್ಲಿ ಮಹಾಯೋಜನೆ ತಯಾರಿಸಿ ಇಚ್ಛೆಯನ್ನು ಘೋಷಿಸಲಾಗಿದೆ.ಈ ಬಗ್ಗೆ ದಿನಾಂಕ:09.08.2021

ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಸದರಿ ಪ್ರದೇಶದ ಮಹಾಯೋಜನೆ ತಯಾರಿಕೆ ಕುರಿತು 60 ದಿನಗಳ ಕಲಾವಧಿಗೆ ಸಾರ್ವಜನಿಕರಿಂದ ಸಲಹೆಗಳನ್ನು ಅಹ್ವಾನಿಸಲು ದಿನಾಂಕ:30.10.2022 ರಂದು ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗಿದೆ. ಸದರಿ ಮಾಹಿತಿಯನ್ನು ದಿನಾಂಕ:29.10.2022ರಂದು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

- ಮಹಾಯೋಜನೆಗೆ ಸಂಬಂಧಿಸಿದಂತೆ, Location map, Local Planning area, Climatolagical studies map, Present land use, Present communication facility, ward map ನಕ್ಷೆಗಳನ್ನು ಸಿದ್ಧಪಡಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 5 ರಂತೆ ದಿ:12.10.2022ನ್ನು ಹಾಲಿ ಭೂಉಪಯೋಗ ನಿರ್ಧರಣಾ ದಿನಾಂಕವೆಂದು ಸರ್ಕಾರದಿಂದ ಅಧಿಸೂಚನೆ ಹೊರಡಿಸಲು ಸರ್ಕಾರದಿಂದ ಕ್ರಮವಹಿಸುವಂತೆ ದಿ:29.10.2022ರಂದು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಲಾಗಿದೆ.
- ಕರ್ನಾಟಕ ಯೋಜನಾ ಪ್ರಾಧಿಕಾರದ (ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ) ನಿಯಮಗಳಂತೆ ಪ್ರಾಧಿಕಾರಗಳ ವ್ಯಾಪ್ತಿಯ ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡಬೇಕಾಗಿರುತ್ತದೆ. ಸದರಿ ನಿಯಮದಂತೆ ನಾಗರೀಕ ಸೌಲಭ್ಯ ಜಾಗಕ್ಕೆ ಖಾತೆ ನೋಂದಾಯಿಸಿಕೊಂಡು ನಂತರದಲ್ಲಿ ನಿಯಮಾನುಸಾರ ಕ್ರಮವಹಿಸಬೇಕಾಗಿರುತ್ತದೆ. ಪ್ರಾಧಿಕಾರದ ವ್ಯಾಪ್ತಿಯ ನಾಗರೀಕ ಸೌಲಭ್ಯ ಜಾಗಗಳನ್ನು ಪರಿತ್ಯಾಜನ ಪತ್ರದ ಮೂಲಕ ಹಸ್ತಾಂತರ ಮಾಡಿಕೊಂಡಿದ್ದು, ಸದರಿ ಜಾಗಕ್ಕೆ ಖಾತೆ ತೆರೆದುಕೊಡಲು ದಿ:29.12.2021, 28/07/2022 ಮತ್ತು 27/09/2022ರಂದು ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ಪತ್ರ ಬರೆದು ಕೋರಲಾಗಿದೆ. ಸದರಿ ಖಾತೆ ಪ್ರಸ್ತಾವನೆಯು ಪ್ರಕ್ರಿಯೆ ಹಂತದಲ್ಲಿದ್ದು ನಾಗರೀಕ ಸೌಲಭ್ಯ ಹಂಚಿಕೆ ಮಾಡಲು ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗಿದೆ.
- ಹುಣಸೂರು ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಗರಸಭೆಯಿಂದ ನತ್ತು ಗ್ರಾಮ ಪಂಚಾಯಿತಿಯಿಂದ ಬರುವ ಕಟ್ಟಡ ನಿರ್ಮಾಣ ಸಂಬಂಧ ಬರುವ ಪ್ರಕರಣಗಳಿಗೆ ತಾಂತ್ರಿಕ ಅನುಮೋದನೆ ನೀಡಲಾಗಿದೆ.
- ಭೂ ಪರಿವರ್ತನೆ ಸಂಬಂಧದ ಪ್ರಕರಣಗಳಿಗೆ ತಾಂತ್ರಿಕ ಅಭಿಪ್ರಾಯವನ್ನು ಜಿಲ್ಲಾಧಿಕಾರಿಗಳು, ಮೈಸೂರು ಇವರಿಗೆ ನೀಡಲಾಗಿದೆ.

- ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಖಾಸಗಿ ವಿನ್ಯಾಸ ನಕ್ಷೆಗಳಿಗೆ ಕರಡು ವಿನ್ಯಾಸ ನಕ್ಷೆ ಮತ್ತು ಅಂತಿಮ ವಿನ್ಯಾಸನಕ್ಷೆ ಮತ್ತು ಶೇ.100% ನಿವೇಶನ ಬಿಡುಗಡೆ ನೀಡಲಾಗಿದೆ.
- ಹುಣಸೂರು ನಗರದ ಮಹಾಯೋಜನೆ ವ್ಯಾಪ್ತಿಯಲ್ಲಿ ಭೂ ಉಪಯೋಗ ಬದಲಾವಣೆ ಕೋರಿ ಬರುವ ಪ್ರಸ್ತಾವನೆಗಳನ್ನು ಕೆಟಿಸಿಪಿ ಕಾಯ್ದೆ 1961ರ ಕಲಂ14(ಎ)ರಂತೆ ಪರಿಶೀಲಿಸಿ ಸರ್ಕಾರದ ಅನುಮೋದನೆಗೆ ಮಾನ್ಯ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಬೆಂಗಳೂರು ಇವರ ಮೂಲಕ ಸಲ್ಲಿಸಲಾಗಿದೆ ಹಾಗೂ ಪ್ರಾಧಿಕಾರದಿಂದ ಕೆಟಿಸಿಪಿ ಕಾಯ್ದೆ 1961ರ ಕಲಂ 69(3)(4)ರನ್ವಯ ಬೂಉಪಯೋಗ ಬದಲಾವಣೆ ಅನುಮೋದನೆ ನೀಡಲಾಗಿದೆ.

## 4. ಸಂಪನ್ಮೂಲಗಳ ಕ್ರೋಢೀಕರಣ :-

- ಬೇಡಿಕೆ, ವಸೂಲಿ ಮತ್ತು ಬಾಕಿ ಪಟ್ಟಿ (ಡಿ.ಸಿ.ಬಿ) – ಯಾವುದೂ ಇಲ್ಲ
- ಮುನಿಸಿಪಾಲಿಟಿ ನಿಧಿ – ಯಾವುದೂ ಇಲ್ಲ

**<u>2022–23ನೇ ಸಾಲಿನ ಆಯವ್ಯಯ :</u>**

2022–23ನೇ ಸಾಲಿಗೆ ಒದಗಿಸಿದ ಆಯವ್ಯಯದ ಸಂಕ್ಷಿಪ್ತ ವಿವರ :

**ಉತ್ತಮತೆ ಶಿಲ್ಕು ಮತ್ತು ಇತರೆ ಶುಲ್ಕದ ವಿವರ**

| ವಿವರ | 2022–23ನೇ ಸಾಲಿನ ವಾಸ್ತವಿಕ ಜಮಾ, ಖರ್ಚು |
|---|---|
| 1 | 2 |
| ದಿ:01.01.2022ಕ್ಕೆ ಪ್ರಾರಂಭಿಕ ಶಿಲ್ಕು | **67,93,316.48** |
| ದಿ:01.01.2022 ರಿಂದ ದಿ:31.12.2022ಕ್ಕೆ ಜಮೆಗಳು | **47,68,754.40** |
| ಒಟ್ಟು | **1,15,62,070.88** |
| ಖರ್ಚುಗಳು | **33,99,417.88** |
| ದಿ:31.12.2022 ರ ಅಂತ್ಯಕ್ಕೆ ಅಖೈರು ಶಿಲ್ಕು | **81,62,653.00** |

### ಕೆರೆ ಅಭಿವೃದ್ಧಿ ಶುಲ್ಕದ ಮಾಹಿತಿ

| ವಿವರ | 2022-23ನೇ ಸಾಲಿನ ವಾಸ್ತವಿಕ ಜಮಾ, ಖರ್ಚು |
|---|---|
| 1 | 2 |
| ದಿ:31.01.2022ಕ್ಕೆ ಪ್ರಾರಂಭಿಕ ಶಿಲ್ಕು | 82,73,662.00 |
| ದಿ:01.01.2022 ರಿಂದ ದಿ:31.12.2022ಕ್ಕೆ ಜಮೆಗಳು | 25,12,569.00 |
| ಒಟ್ಟು | 1,07,86,231.00 |
| ಖರ್ಚುಗಳು | – |
| ದಿ:31.12.2022 ರ ಅಂತ್ಯಕ್ಕೆ ಅಖೈರು ಶಿಲ್ಕು | 1,07,86,231.00 |

### ಸೆಸ್ ಶುಲ್ಕ

| ವಿವರ | 2022-23ನೇ ಸಾಲಿನ ವಾಸ್ತವಿಕ ಜಮಾ, ಖರ್ಚು |
|---|---|
| 1 | 2 |
| ದಿ:01.01.2022ಕ್ಕೆ ಪ್ರಾರಂಭಿಕ ಶಿಲ್ಕು | – |
| ದಿ:01.01.2022 ರಿಂದ ದಿ:31.12.2022ಕ್ಕೆ ಜಮೆಗಳು | **15,51,430.00** |
| ಖರ್ಚುಗಳು | – |
| ದಿ:31.12.2022 ರ ಅಂತ್ಯಕ್ಕೆ ಅಖೈರು ಶಿಲ್ಕು | **15,51,430.00** |

**5. 2022-23 ರ ವೆಚ್ಚ:-**

**2022-23 ನೇ ಸಾಲಿನಲ್ಲಿ ಒದಗಿಸಿದ ಆಯವ್ಯಯದಲ್ಲಿನ (ದಿನಾಂಕ:31.12.2022)ನಿರ್ವಹಿಸಲಾದ ವೆಚ್ಚದ ವಿವರ:**

| ವಿವರ | 2022–23ನೇ ಸಾಲಿನ ವಾಸ್ತವಿಕ |
|---|---|
| 1 | 2 |
| ಖರ್ಚುಗಳು | **33,99,417.88** |

**ಷರಾ:** ಹುಣಸೂರು ಯೋಜನಾ ಪ್ರಾಧಿಕಾರಕ್ಕೆ ಸರ್ಕಾರದಿಂದ ಅಧ್ಯಕ್ಷರು, ಸದಸ್ಯರು ಹಾಗೂ ಸದಸ್ಯಕಾರ್ಯದರ್ಶಿ/ಸಹಾಯಕ ನಿರ್ದೇಶಕರನ್ನು ನೇಮಕ ಮಾಡಲಾಗಿರುತ್ತದೆ. ಕಛೇರಿಯ ದೈನಂದಿನ ಕೆಲಸಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಕಛೇರಿ ಸಹಾಯಕರು, ಕಂಪ್ಯೂಟರ್ ಆಪರೇಟರ್, ನಿವೃತ್ತ ನೌಕರರ ಗೌರವ ಧನ ಹಾಗೂ ಇತರೆ ಸಾದಿಲ್ವಾರು ವೆಚ್ಚವನ್ನು ಒಳಗೊಂಡಿರುತ್ತದೆ.

## 6. ಭೌತಿಕ ಪ್ರಗತಿ:–

**2021–22ನೇ ಸಾಲಿನಲ್ಲಿ ಸಾಧಿಸಿದ ಭೌತಿಕ ಪ್ರಗತಿ ವಿವರ:**

- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 10(1)ರಡಿಯಲ್ಲಿ ಮಹಾಯೋಜನೆ ತಯಾರಿಸಿ ಇಚ್ಛೆಯನ್ನು ಹೊರಡಿಸಲಾಗಿದೆ. ಹಾಗೂ ಮಹಾಯೋಜನೆಗೆ ಸಂಬಂಧಿಸಿದ ವಿವಿಧ ನಕ್ಷೆಗಳನ್ನು ಸಿದ್ದಪಡಿಸಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ5ರಂತೆ ದಿ:12/10/2022ನ್ನು ಹಾಲಿ ಭೂಉಪಯೋಗ ನಿರ್ಧರಣಾ ದಿನಾಂಕವೆಂದು ಘೋಷಣೆಗೆ ಹೊರಡಿಸಲಾಗಿದೆ.
- ಭೂ ಪರಿವರ್ತನೆ ಸಂಬಂಧದ ಪ್ರಕರಣಗಳಿಗೆ ತಾಂತ್ರಿಕ ಅಭಿಪ್ರಾಯ ನೀಡುವುದು–37
- ಖಾಸಗಿ ವಸತಿ ಬಡಾವಣೆಗಳಿಗೆ ಅನುಮೋದನೆ ನೀಡಿರುವುದು–14
- ಕಟ್ಟಡ ಕಟ್ಟಲು ತಾಂತ್ರಿಕ ಅಭಿಪ್ರಾಯ–63
- ಭೂಉಪಯೋಗ ಬದಲಾವಣೆ ನೀಡಿರುವ ಪ್ರಕರಣಗಳು–06

## 7. ಕಲ್ಯಾಣ ಕಾರ್ಯಕ್ರಮಗಳ ಪ್ರಗತಿ:–

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನಿಧಿ (ಶೇ. 24.10) – ಯಾವುದು ಇಲ್ಲ
- ಬಡಜನರ ಕಲ್ಯಾಣ ನಿಧಿ (ಶೇ. 7.25) – ಯಾವುದು ಇಲ್ಲ
- ದಿವ್ಯಾಂಗರ ಕಲ್ಯಾಣ ನಿಧಿ (ಶೇ.5) – ಯಾವುದು ಇಲ್ಲ

**8.ವಿಶೇಷ ಸಾಧನೆ/ಪ್ರಶಸ್ತಿ :–** ಯಾವುದೂ ಇಲ್ಲ

**9. 2022–23ನೇ ವರ್ಷದ ಗುರಿ:–**

- ಹುಣಸೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯಲ್ಲಿ ಈಗಾಗಲೇ ವಿಸ್ತರಿಸಲಾಗಿದೆ. ಈ ಹಿಂದೆ ಹುಣಸೂರು ಪಟ್ಟಣದ ಮಹಾಯೋಜನೆಗೆ ದಿನಾಂಕ:09.07.2009 ರಲ್ಲಿ ಸರ್ಕಾರದಿಂದ ಅಂತಿಮ ಅನುಮೋದನೆ ನೀಡಲಾಗಿದ್ದು, ಪ್ರಸ್ತುತ ಹಾಲಿ ಸ್ಥಳಿಯ ಯೋಜನಾ ಪ್ರದೇಶ ಮತ್ತು ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಿದ್ದಪಡಿಸಬೇಕಾಗಿರುತ್ತದೆ. ಅದರಂತೆ ಕೆಟಿಸಿಪಿ ಕಾಯ್ದೆ 1961ರ ಕಲಂ6,7 ಮತ್ತು ಇತರೆ ಕಲಂ ರನ್ವಯ ಹಾಲಿ ಸ್ಥಳೀಯ ಯೋಜನಾ ಪ್ರದೇಸ ಮತ್ತು ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆಯನ್ನು ಸಿದ್ದಪಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಕ್ರಮವಹಿಸಲಾಗುವುದು.
- ಪ್ರಾಧಿಕಾರದಿಂದ ಸಂಗ್ರಹಿಸಲಾಗಿರುವ ಕೆರೆ ಅಭಿವೃದ್ಧಿ ಶುಲ್ಕದಿಂದ ಹುಣಸೂರು ನಗರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೆರೆ ಅಭಿವೃದ್ಧಿಪಡಿಸುವ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.
- ಪ್ರಾಧಿಕಾರದಿಂದ ವಸೂಲಿ ಮಾಡುವಾಗ ಶುಲ್ಕದಿಂದ ಹುಣಸೂರು ಯೋಜನಾ ಪ್ರಾಧಿಕಾರದ ಕಛೇರಿ ನಿರ್ವಹಿಸಲು ಬೇಕಾದ ಹಣವನ್ನು ಪರಿಶೀಲಿಸಿಕೊಂಡು ಕಟ್ಟಡವನ್ನು ಕಟ್ಟುವ ಸಂಬಂಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.
- ಹುಣಸೂರು ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆಯನ್ನು ಕರ್ನಾಟಕ ಪ್ರಾಧಿಕಾರ(ನಾಗರೀಕ ಸೌಲಭ್ಯ ಹಂಚಿಕೆ) ನಿಯಮ–2016 ರೀತ್ಯಾ ಮಂಜೂರು ಮಾಡಲು ಕ್ರಮ ವಹಿಸಲಾಗುವುದು.

(ಶ್ರೀ.ಶ್ರೀಧರ್.ಹೆಚ್.ವಿ)
30/06/2023
ಸದಸ್ಯ ಕಾರ್ಯದರ್ಶಿಗಳು
ಹಾಗೂ ಸಹಾಯಕ ನಿರ್ದೇಶಕರು
ಹುಣಸೂರು ಯೋಜನಾ ಪ್ರಾಧಿಕಾರ,
ಹುಣಸೂರು

# HUNSUR PLANNING AUTHORITY

## HUNSUR – 571105

## 2022–2023

# ANNUAL REPORT

30/06/2023

ಸದಸ್ಯ ಕಾರ್ಯದರ್ಶಿಗಳು
ಹಾಗೂ ಸಹಾಯಕ ನಿರ್ದೇಶಕರು
ಹುಣಸೂರು ಯೋಜನಾ ಪ್ರಾಧಿಕಾರ.
ಹುಣಸೂರು

# 1.Preamble :-

Hunsur Town is an important Town and Taluk Head Quarters in Mysore District. Hunsur City Municiple Council is the Local body of the Town. This Town is located at a distance of 45 km from the District Centre Mysore, at a distance of 23 km towards west from piriyapattana, at a distance of 28 km towards south from H.D.Kote and at a distance of 21 km towords North from K.R.Nagara and at a distance 236km from the Capital city of Karnataka Bengaluru. Bengalur-Bantwal National Highway-275, Mysore-K.R.Nagar State Highway-57 and Hunsur-Gonikoppa State Highway-90 .

Geography of the Hunsur Taluk consists of Forest Area, Series of Hill and Rivers. To develop the Town in systematic way, according to Karnataka Town and Country Planning Act 1961 section 4(c). The Government has been declared Local Planning Area for an area of 1036 hectares it includes Hunsur Town and 12 villages and also extended LPA to an total extent of 3773.08 hectares.

## I. Authority objectives :

Hunsur Town Planning Authority has been Constituted as per the clause 4(C) of Karnataka Town & Country Planning act 196I vide Government Notification No: NAE 184 MYAPRA 2016 Dated:04/03/2017 to the earlier LPA declared on dated: 02-09-1998 and started functioning from 14/04/2017as a planning authority The Master Plan approved in the year 2009 and revision has to be taken up as per KTCP act 1961. As per govt. notification dated: 04/03/2017 LPA is extended to an total extent of 3773.08 hectes and independent planning authority is constituted.

Preparation of Master Plan is in progress for the existing and Extended local planning area of the Hunsur planning authority.

Preparation of Master Plan for the Local Planning Area and submit same for the approval of the Government as per the Karnataka Town & Country Planning act 196l besides control of the developments & to ensure the enforcement of the Master Plan in the Local Planning Area, providing technical opinion to the local bodies, technical approval to private layouts in the converted lands and to Ensure planned developments in its jurisdiction.

## II. Functions :

Planning Authority in its jurisdiction, preparation of master plan and getting approved by the Government, revising the master plan, controlling developments as per the master plan and issuing technical approval to layouts and providing technical opinion to the revenue department for conversion of agricultural lands to non-agricultural purposes.

# 2. Administative Structure :-

### I. The Administrative body of Hunsur Planning Authority in the Year 2022-23 is as follows.

| Sl.no | Designation and Address | Chairman/ Member of the Authority |
|---|---|---|
| 1. | Sri H K Ganesh. Chairman, Planning Authority, Hunsur | From 31.03.2021 to till date |
| 2. | A) Sri Lasumanaik C, Member Secretary, Planning Authority, , Hunsur<br><br>B) Sri.H.V.Sridhar, Director of town & country planning and Member Secretary, Planning Authority, , Hunsur | From 03.02.2021 to 07.07.2022<br><br>From 07.07.2022 to till date |
| 3. | Commissioner, City Municiple Council, Hunsur,Member | From 01.04.2021 to till date |
| 4. | 4 Members Nominated from Government<br>1. Sri Govinda naik, Member<br>2. Sri T D Narayana, Member<br>3. Sri H C Ravi, Member<br><br>Nominated by City Municiple Council,<br>1. Sri H P Sathish Kumar<br>2. Sri.Swamygowda | From 31.03.2021 to till date<br>From 31.03.2021 to till date<br>From 31.03.2021 to till date<br><br>From 31.03.2021 to 27.10.2022<br>From 27.10.2022 to till date |

### II. Particulars of Administrative Expenditure :-

- Chairman Honorarium, House Rent Allowance and other Expenditure
- Salary of Member Secretary

- Honorarium of Nominated Members from Government
- Outsource Services charges
- Detailed Contingency Expenditure (Offices Building, Telephone, Furniture, Printing, Drawing and Stationery and other Expenditure)

# 3. Achieved Progress :-

**Total achieved progress of detailed information:**

- Under sec 10(1) Of Karnataka town and country Planning Act,1961, the intention to prepared a Master Plan is declared. Regarding this on 09.08.2021 published in the Karnataka state Gazette in a press release dated:30.10.2022 to invite suggestions from the public for a period of 60 days regarding the preparation of the Master Plan for the Area. The said information has been submitted on date:29.10.2022 for the information of Honourable Director, Town and Country Planning Department. Bangalore.
- Regarding the Master Plan, Location Map, Local Planning area, Climatological studies map, Present Land use, Present Communication facility, ward map will be prepared. In this background, a notification has been submitted to the Honourable Director, Town and Country Planning Department, Bangalore on 29.10.2022 to take action by the Government to issue a notification as per section 5 of the Karnataka Town and country planning Act,1961 on 12.10.2022 as the current land use determination date.
- As per Karnataka planning Authority (Civic Facility Site Allocation) Rules, the civic facility sites under the authority have to be allotted. According to the rule one has to register an account for the civic facility site and then follow the rules. The civic facility areas covered by the authority have to be allotted. According to the rule, one has to register an account for the civic facility site and then follow the rules. The civic facility areas covered by the authority have been handed over through a letter of relinquishment and the account for the said area is to be opened on 29/12/2021 on 28/07/2022 and 27/09/2022 a letter was requested to the concerned Local body. The said account proposal is under processing stage and a public notice has been issued regarding application in the prescribed form for allotment of civic facilities.
- Technical opinion has been given to cases related to building construction coming from municipal council and Gram Panchayat under the jurisdiction-- of Hunsur Planning Authority.
- Technical opinion for land conversion related cases has been given to District Collector, Mysore.

- Drafting of private layout maps falling within local planning area and final design and 100% release for site.
- Proposals seeking change of land use within the scope of the Hunsur city Master plan have been reviewed and submitted to the Government for approval as per section 14 (a) of the KTCP Act 1961 through the Honourable Director Town and country planning Department, Bangalore and approval of change of land use by the Authority under section 69(2) of KTCP Act 1961.

## 4. Resources of Consolidation :-

- Requirement and recovery and balance sheet(D.C.B) - Nil -
- Municipality Fund - Nil -

**Budget for the Year 2020-21:**

**Brief Budget for the year 2020-21**

**Details of Fees collected under KTCP act 1961 sec (18) and other**

| Description | Estimates for the year 2022-23 (up to 31.12.2022) |
|---|---|
| 1 | 2 |
| Opening Balance | 67,93,316.48 |
| Receipts | 47,68,754.40 |
| Total | 1,15,62,070.88 |
| Payments | 33,99,417.88 |
| Closing Balance(As on 31/12/2022) | 81,62,653.00 |

**Details of Lake Development Fees collected**

| Description | Estimates for the year 2022-23 |
|---|---|
| 1 | 2 |
| Opening Balance | 82,73,662.00 |
| Receipts | 25,12,569.00 |
| Total | 1,07,86,231.00 |
| Payments | – |
| Closing Balance(As on 31/12/2022) | 1,07,86,231.00 |

**Details of ses Fees collected**

| Description | Estimates for the year 2022-23 |
|---|---|
| 1 | 2 |
| Opening Balance | – |
| Receipts | 15,51,430.00 |
| Payments | – |
| Closing Balance(As on 31/12/2022) | 15,51,430.00 |

## 5.Expenditure of 2022-23 :-

**Brief Expenditure as allotted in the Budget for the year 2022-23**

| Particulars | For the year 2022-23 Actual |
|---|---|
| 1 | 2 |
| Payments | 33,99,417.88 |

**Remarks:** Chairman for the authority is nominated by the Government from 31-03-2021 The above expenditure is only for drawing salaries of Member Secretary and Out Sources employees, Chairman Honorarium, house rent allowance and other expenditure, Honorarium of nominated Members and other office expenses.

## 6. Physical Progress:-

**Particulars of achieved physical progress of the year 2022-23**

- Providing technical Opinion of Building plans within the local planning area jurisdiction. -63
- Given Technical Opinion to the Revenue Department for Conversion of Agricultural Lands to Non Agricultural Purposes-37
- Technical Approval is given to Private Layouts for the Converted Lands-14
- Change of land use given by the authority-06

## 7. Progress of Welfare Programmes :-

- S.C /S.T Community Development (24.10%) - Nil -
- Weaker Section Welfare Fund (7.25%) - Nil -
- Physically Handicapped Welfare Fund (5%) - Nil -

## 8. Special Performance/ Award: - Nil –

## 9. Aims of 2023-24:

- The local Planning area boundary of Hunsur town has already been extended. Earlier Hunsur town master plan dated:09.07.2009 was given final approval by the government and the existing local planning area are to be prepared Accordingly in accordance with section 6,7 and other sections of the KTCP Act, 1961. The Master plan for current LPA and extended LPA will be prepared and submitted for approved by the Government.
- From the lake development fee collected by the authority, action will be taken to develop the lake within the Local planning area of Hunsur city.
- From the fees collected by the Authority, the money required to maintain the office of Hunsur planning Authority will be checked and action will be taken as per rules regarding the construction of the building.
- Allotment of Urban facility under the jurisdiction of Hunsur Planning Authority will be done as per Karnataka Authority Rules-2016.

(Sri.Sridhar.H.V)
30/06/2023
Member Secretary and
Asst.Director of Town & Country Planning
Hunsur Planning Authority,
Hunsur